# ಖುಷಿಯಲ್ಲಿ ಅದ್ದುವ ಬರಹಗಳು

**ನಾ**ವು ಬರೆದ ಸಾಹಿತ್ಯವನ್ನು ಓದುವವರೇ ಇಲ್ಲ ಎಂದು ನಮ್ಮ ಲೇಖಕರು ವ್ಯಾಪಾರ ಆಗದ ಹೂವಿನಂಗಡಿಯವನ ತರಹ ಆಗಾಗ ಗೊಣಗುತ್ತಿರುತ್ತಾರೆ. ಆದರೆ ಓದುಗರ ತಕರಾರು – ತಮ್ಮ ವಿರಾಮದ, ಆರಾಮದಾಯಕ ಓದಿಗೆ ಒದಗುವಂತಹ ಸಾಹಿತ್ಯ ಬರುತ್ತಿಲ್ಲ ಎಂಬುದು. ಓದುಗರ ಅಭಿಪ್ರಾಯ ಈ ದಿಸೆಯಲ್ಲಿ ಹೆಚ್ಚು ಸರಿ ಎನ್ನಿಸುತ್ತದೆ. ಅವರನ್ನು ಸೆಳೆಯುವಂತಹ, ಸರಾಗವಾಗಿ ಓದುವಂತಹ ಸಾಹಿತ್ಯ ಹೆಚ್ಚಾಗಿ ಬರುತ್ತಿಲ್ಲ ಎನ್ನುವುದು ನಿಜ. ಗುಣಪಕ್ಷಪಾತಿಯಾಗಿರುವ ಓದುಗರು ಉತ್ತಮ ಸಾಹಿತ್ಯವನ್ನು ಎಂದೂ ಕೈಬಿಟ್ಟಿಲ್ಲ. ಇಲ್ಲದಿದ್ದರೆ ನಮ್ಮ ಅನೇಕ ಲೇಖಕರ ಬರಹಗಳು ಮರು ಮುದ್ರಣಗೊಳ್ಳುತ್ತಿರಲಿಲ್ಲ.

ಓದುಗರನ್ನು ಸೆಳೆಯಲು ಬರವಣಿಗೆಯ ಗುಣಮಟ್ಟ ಮಾತ್ರ ಮುಖ್ಯವಾಗುತ್ತದೆ. ಅದರ ಜೀವಂತಿಕೆಯೇ ಅದನ್ನು ನಿರ್ಧರಿಸುವ ಪ್ರಮುಖ ಅಂಶ. ಲೇಖಕರ ಪ್ರಾದೇಶಿಕತೆ, ಪ್ರಾಂತ್ಯ, ಜಾತಿ, ಹಣ, ಅಂತಸ್ತು ಇವು ಯಾವುದನ್ನೂ ಜನರು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಸಾಹಿತ್ಯ–ಸಂಸ್ಕೃತಿಯನ್ನು ಉಳಿಸುವ ಮಾತನ್ನು ಹೊರಗಿಟ್ಟು ನೋಡಿದರೆ, ಓದುಗ/ಳು ಒಂದು ಪುಸ್ತಕವನ್ನು ಹಣ ಕೊಟ್ಟು ಕೊಂಡಿರುತ್ತಾರೆ. ಅದಕ್ಕೂ ಮಿಗಿಲಾಗಿ ಅವರ ವೇಳೆ, ಶ್ರಮ ಪುಸ್ತಕ ಓದುವಲ್ಲಿ ವಿನಿಯೋಗವಾಗಿರುತ್ತದೆ. ಹಾಗಿರುವಾಗ ಯಾವ ಓದುಗರೂ ಕೆಟ್ಟಕೃತಿಗಳನ್ನು ಓದಿ ಗೊತ್ತಿದ್ದೂ ತಮ್ಮ ಕಾಲಮೇಲೆ ಕಲ್ಲನ್ನು ಎತ್ತಿಹಾಕಿಕೊಳ್ಳುವುದಿಲ್ಲ. ಸಹಜವಾಗಿಯೇ ಜನರು ಕೊಂಡುಕೊಳ್ಳುವ ಪುಸ್ತಕ, ಸಿನಿಮಾ, ಸಂಗೀತ ಯಾವುದೇ ಇರಲಿ ತುಸುವಾದರೂ ಮನಮುಟ್ಟುವಂತೆ, ನಿರೀಕ್ಷೆ ಹುಸಿಹೋಗದಂತೆ ಇರಬೇಕಾಗುತ್ತದೆ. ಸಾಹಿತ್ಯದ ಓದು ಕೂಡ ಮನರಂಜನೆ ಎಂಬುದನ್ನು ಮರೆಯದಿರೋಣ.

ಹಿಂದಿನ ದಿನಮಾನಗಳಿಗೆ ಹೋಲಿಸಿದರೆ ಓದುಗರು ನಿರಾಶೆಗೊಳ್ಳುವ ವಾತಾವರಣ ಈಗ ಇದೆ. ಉತ್ತಮ ಲೇಖಕರ ಸಂಖ್ಯೆ ತುಂಬ ಕಡಿಮೆ. ಅದರಲ್ಲೂ ಓದುಗರನ್ನು ಒಲಿಸಿಕೊಳ್ಳುವಂತೆ, ಖುಷಿಯಲ್ಲಿ ಅದ್ದುವಂತೆ, ರೋಮಾಂಚನದಿಂದ ಅದರುವಂತೆ ಬರೆಯುವವರು ಕನ್ನಡದಲ್ಲಿ ತೀರ ಕಡಿಮೆಯಾಗಿದ್ದಾರೆ. ಅದಕ್ಕೆ ಕಾರಣಗಳು ಹಲವಾರು ಇದ್ದರೂ ಬರವಣಿಗೆ ಅನೇಕರ ಆದ್ಯತೆಯಾಗಿ, ಜೀವನದ ಅಗತ್ಯವಾಗಿ ಉಳಿದಿಲ್ಲ.

'ಮಯೂರ' ಎಂದಿನಿಂದಲೂ ಓದುಗರನ್ನು ಗಮದಲ್ಲಿಟ್ಟುಕೊಂಡು ಬರಹಗಳನ್ನು ಪ್ರಕಟಿಸುತ್ತ ಬಂದಿದೆ. ಈ ಬಾರಿಯೂ ಓದುಗಸ್ನೇಹಿ ಬರಹಗಳನ್ನು ಒಳಗೊಂಡಿದೆ. ಮುದಗೊಳಿಸುವ ಭಿನ್ನಧಾಟಿ, ಶೈಲಿಯ ಕತೆಗಳು, ಲೇಖನಗಳು ಮತ್ತು ತಮಾಷೆಯ ಬರಹಗಳಿವೆ. ಇವು ಆಪ್ತ ಓದಿಗೆ ಇಂಬಾಗಹುದು.

**ಸಂದೀಪ ನಾಯಕ**

